# ಭಾರತದ ಸಂಸ್ಕೃತಿ ಮತ್ತು ಕಲೆಗಳ ಅಳಿವು ಉಳಿವು- ಒಂದು ವಿಮರ್ಷೆ

ಭಾರತ ಎಂದರೆ ಕೇವಲ ಭೌಗೋಳಿಕ ನಕ್ಷೆಯಲ್ಲ ವಿವಿಧ ಜಾತಿ, ಜನಾಂಗ ಬುಡಕಟ್ಟು, ಧರ್ಮಗಳ ವೈಭವ ನೋಟ ಭಾರತ. 'ಭಾರತೀಯ ಸಂಸ್ಕೃತಿ' ಎಂದರೆ ಅದು ಮಾತುಗಳಿಗೆ ನಿಲುಕದ್ದು, ಬರಹಗಳಿಗೆ ಎಟುಕದ್ದು, ವಿಶ್ವ ಅಜ್ಞಾನದಲ್ಲಿ ಮುಳುಗಿ ಕತ್ತಲೆಯಲ್ಲಿದ್ದಾಗ, ಇಡೀ ವಿಶ್ವಕ್ಕೆ ಹಸಿವನ್ನ ನೀಗಿಸಿದ ಅಮೂಲ್ಯ ಸಂಸ್ಕೃತಿಯೇ ನಮ್ಮ 'ಭಾರತೀಯ ಸಂಸ್ಕೃತಿ' .

ಒಮ್ಮೆ ಮೂವರು ವ್ಯಕ್ತಿಗಳು ಹಾದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಸಂದರ್ಭದಲ್ಲಿ ಒಂದು ಕಲ್ಲನ್ನು ನೋಡುತ್ತಾರೆ. ಮೊದಲನೆಯವನು ಇದೊಂದು ಸಾಮಾನ್ಯ ಕಲ್ಲು ಎಂದು ಮುಂದೆ ನಡೆಯುತ್ತಾನೆ, ಎರಡನೇಯವನು ಇದೊಂದು ನಿಷ್ಪ್ರಯೋಜಕ ಕಲ್ಲು ಬಂಡೆ. ಇದನ್ನು ಪುಡಿ ಮಾಡಿ ಎಂದು ಆದೇಶ ನೀಡುತ್ತಾನೆ. ಆದರೆ ಮೂರನೇ ವ್ಯಕ್ತಿ ಮಾತ್ರ ಆ ಕಲ್ಲು ಬಂಡೆಯ ಮೇಲೆ ತನ್ನ ಪ್ರತಿಭೆಯನ್ನು ಉಪಯೋಗಿಸಿ ಸುಂದರ ಮೂರ್ತಿಯನ್ನು ಸ್ಥಾಪಿಸಿ ದೇವರೆಂದು ಪೂಜಿಸುತ್ತಾನೆ. ಹಾಗಾದರೆ ಈ ಮೂವರು ಯಾರು? ಎನ್ನುವ ಪ್ರಶ್ನೆ ನಿಮ್ಮನ್ನು ಕಾಡದೇ ಇರದು. ಅವರಲ್ಲಿ ಮೊದಲನೇಯವನು ಪ್ರಕೃತಿ, ಎರಡನೇಯವನು ವಿಕೃತಿ ಹಾಗೂ ಮೂರನೇಯವನೇ ಸಂಸ್ಕೃತಿ.

'ನಿನ್ನೆಯ ಆಧುನಿಕತೆ ಇಂದಿನ ಸಂಪ್ರದಾಯ. ಇಂದಿನ ಆಧುನಿಕತೆ ನಾಳೆಯ ಸಂಪ್ರದಾಯವಾಗುತ್ತದೆ' ಎನ್ನುವ ಮಾತಿಗೆ ಅನುಗುಣವಾಗಿ ಇಂದಿನ ಜಗತ್ತು ಸಾಗುತ್ತಿದೆ. ವೇಗವಾಗಿ ಬೆಳೆಯುತ್ತಿರುವ ಆಧುನಿಕತೆಯೊಂದಿಗೆ ನಾವು ಹೆಜ್ಜೆಯನ್ನ ಹಾಕಲೇಬೇಕಾದ ಅನಿವಾರ್ಯತೆ ನಮ್ಮ ಮುಂದಿದೆ. ಆದರೆ ನಮ್ಮಲ್ಲಿರವ ಅಂತಃಸ್ಸತ್ವವನ್ನು ಮರೆತು ಆಧುನಿಕತೆಯ ಅಡಿಯಾಳಾಗಬಾರದು. ಸಿಂಧೂ ನಾಗರೀಕತೆಯ ಸಮಯದಲ್ಲಿ ಹುಟ್ಟಿಕೊಂಡ ಆಚರಣೆ, ಸಂಪ್ರದಾಯ, ಕಲೆಗಳು ಇಂದು ಭಾರತ ದೇಶದ ಕಣ-ಕಣಗಳಲ್ಲಿ ಸೇರಿಕೊಂಡು ವಿಶ್ವದೆಲ್ಲೆಡೆ ಭಾರತದ ಹಿರಿಮೆಯನ್ನು ಸಾರುತ್ತಿವೆ. ನಮ್ಮ ದೇಶದ ಕಲೆ ಹಾಗೂ ಸಂಸ್ಕೃತಿಯ ಪರಂಪರೆ ಕೇವಲ ಪ್ರದರ್ಶನಗಳಿಗೆ ಸೀಮಿತವಾಗದೆ ಮನುಷ್ಯ ಜೀವನದ ಅವಿಭಾಜ್ಯ ಅಂಗವಾಗಿ ಬಿಟ್ಟಿದೆ. ಒಂದೆಡೆ ಕಲಾರಾಧಕರ ಬದುಕು - ಬವಣೆ ಬಗ್ಗೆ ಯೋಚಿಸಿದಾಗ ಮನಸ್ಸು ಭಾರವಾಗಿ ಬಿಡುತ್ತದೆ. ಆಧುನಿಕ ವಿದ್ಯಮಾನಗಳು ಕ್ರಮೇಣ ನಮ್ಮ ಸಂಸ್ಕೃತಿಗಳನ್ನು ಆವರಿಸಿ ಕಲೆಗಾರರಿಳಗಿನ ಕಲಾ ಪ್ರತಿಭೆಗಳನ್ನು ಕ್ರಮೇಣ ಇಲ್ಲವಾಗಿಸುತ್ತಿದೆ ಎನ್ನುವ ಭಯ ಕಾಡಹತ್ತಿದೆ.

ಹಿಂದೊಂದು ಕಾಲವಿತ್ತು. ಮನೆ ಮಂದಿಯೆಲ್ಲ ಬಯಲಾಟ ನೋಡಲೆಂದು ದೂರದ ಊರುಗಳಿಗೆ ನಡೆದುಕೊಂಡು ಹೋಗಿ ಯಕ್ಷಗಾನದ ಕಲೆಯನ್ನ ನೋಡುವ ಚೆಂದ, ನೋಡಿ ಬಂದು ತಮ್ಮ ಮಕ್ಕಳಿಗೆ ಮೊಮ್ಮಕ್ಕಳಿಗೆ ಆ ಕಥೆಯನ್ನ ಹೇಳುತ್ತಿದ್ದ ರೀತಿ ಇಂದಿಗೂ ನಮಗೆ ನೆನಪಿನಲ್ಲಿ ಉಳಿದಿದೆ. ಇನ್ನು ಕರ್ನಾಟಕದ ಜಾನಪದ ಕಲೆಗಳನ್ನ ನೋಡುವುದಾದರೆ, ಮೈಸೂರು ಭಾಗದಲ್ಲಿ ಭರತನಾಟ್ಯ, ಡೊಳ್ಳು ಕುಣಿತ, ಕಂಸಾಳೆ ನೃತ್ಯ, ಸುಗ್ಗಿ ಕುಣಿತ, ಸೋಮನ ಕುಣಿತ ನಾವು ಕಾಣಬಹುದಾಗಿದೆ.

ಇತ್ತ ಕರಾವಳಿ ಭಾಗದಲ್ಲಿ ದೈವೀಕತೆ ಹಾಗೂ ಸಾಂಸ್ಕೃತಿಕ ಕಲೆಗಳು ಒಂದಕ್ಕೊಂದು ಹೊಂದಿಕೊಂಡು ಸಾಗುತ್ತಿದೆ. ಭೂತಾರಾಧನೆ ಎನ್ನುವುದು ಕರಾವಳಿ ಭಾಗದ ಜನರ ಭಾವನೆಯಲ್ಲಿ ಅಭಿವ್ಯಕ್ತವಾಗಿರುವ ಸಾಂಪ್ರದಾಯಿಕ ಕಲೆಯಾಗಿದ್ದು, ಇಂದಿಗೂ ನಾವು ಈ ಕಲೆಯನ್ನು ಆರಾಧಿಸುತ್ತಾ, ಪೋಷಿಸುತ್ತಾ ಬಂದಿದ್ದೇವೆ. ಈ ಹಿಂದೆ ಶಿವರಾಮ ಕಾರಂತರು ತಮ್ಮ 'ಚೋಮನ ದುಡಿ' ಕಲಾತ್ಮಕ ಚಿತ್ರದ ಮೂಲಕ ಕರಾವಳಿಯ ಸಾಂಪ್ರದಾಯಿಕ ಕಲೆಗಳ ಬಗ್ಗೆ ಬೆಳಕು ಚೆಲ್ಲಿದ್ದರು. ಹಾಗೇ ಇಂದಿನ ಆಧುನಿಕ ಕಾಲಘಟ್ಟದಲ್ಲಿ ಕಾಂತಾರ ಎನ್ನುವ ಚಿತ್ರದ ಮೂಲಕ ರಿಷಬ್ ಶೆಟ್ಟಿ ನಮ್ಮ ಕರಾವಳಿ ಮಣ್ಣಿನ ಸೊಬಗನ್ನು ಜನರಿಗೆ ತೋರಿಸುವ ಮೂಲಕ ದೈವಾರಾಧನೆಯ ಮೂಲವನ್ನ ಇಡೀ ಪ್ರಪಂಚಕ್ಕೆ ಸಾರುವ ಕೆಲಸ ಮಾಡಿದ್ದರು. ಕರಾವಳಿಯ ಗಂಡುಕಲೆ ಎಂದೇ ಪ್ರಖ್ಯಾತವಾಗಿರುವ ಯಕ್ಷಗಾನ ನಮ್ಮ ಭಾಗಗಳಲ್ಲಿ ಸಾಕಷ್ಟು ಜನಪ್ರಿಯತೆಯನ್ನ ಗಳಿಸಿದ್ದು ಇಂದಿಗೂ ಕಾಳಿಂಗ ನಾವುಡರಂತ ದಿಗ್ಗಜರನ್ನ ನಾವು ಸ್ಮರಿಸುತ್ತಿದ್ದೇವೆ. ಅದಕ್ಕೆ ಕಾರಣ ಅವರ ಕಲಾಸೇವೆ; ಅವರು ಕಲೆಯನ್ನು ಆರಾಧಿಸಿದ ರೀತಿ.

ನಾವುಡರಂತ ಮೇರು ವ್ಯಕ್ತಿತ್ವದ ಕೊರತೆ ಇಂದಿನ ಯುವ ಸಮಾಜದಲ್ಲಿ ಎದ್ದು ಕಾಣುತ್ತಿದೆ. ಇಂತಹ ಕೊರತೆಯನ್ನ ನೀಗಿಸಲು ಯುವಕರನ್ನ ಕಲೆ ಸಂಸ್ಕೃತಿಯತ್ತ ಒಲವು ಮೂಡಿಸಲು ಪ್ರೇರಣೆ ನೀಡಬೇಕು. ಕೊರೋನಾದಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕಲಾವಿದರ ಪಾಡು ನಿಜಕ್ಕೂ ಶೋಚನೀಯವಾಗಿತ್ತು, ಕಲೆಯ ಉಳಿವು ಆಗಬೇಕೆಂದರೆ ಮೊದಲು ಕಲಾವಿದನ ಬದುಕನ್ನ ರೂಪಿಸುವ ಕೆಲಸವಾಗಬೇಕು. ಅದೆಷ್ಟೋ ಕಲಾವಿದರು ತಮ್ಮ ಒಂದು ಹೊತ್ತಿನ ಊಟಕ್ಕೆ ಪರದಾಡಿಕೊಂಡು ಜೀವನ ನೆಡೆಸುವವರಿರುತ್ತಾರೆ, ಅಂತವರ ಪಾಲಿಗೆ ನಾವೂ ಆಶಾಕಿರಣವಾಗಬೇಕು ಹಾಗಾದರೆ ಮಾತ್ರ ಕಲೆ ಉಳಿಯಲು ಸಾಧ್ಯ. ಕಲಾವಿದ ಉಳಿದರೆ ಕಲೆ ಉಳಿದಂತೆ, ಹೌದು ಒಬ್ಬ ಕಲಾವಿದ ಉಳಿದರೆ ಅವನ ಸೇವೆಯಿಂದ ಇನ್ನಷ್ಟು ಜನ ಪ್ರೇರಣೆ ಪಡೆದು ಅನೇಕ ಕಲಾವಿದರು ಹುಟ್ಟಿಕೊಳ್ಳಲು ಪ್ರೇರಣೆಯಾಗುತ್ತದೆ.ಇನ್ನೂ ಜಾನಪದ ಕಲೆಗಳು ಸಂಸ್ಕೃತಿಯ ಜೋತಕವಾಗಿದ್ದು ಶಿಕ್ಷಣ,ಆರೋಗ್ಯ,ಮಾನವ ಹಕ್ಕು ಮುಂತಾದ ವಿಷಯಗಳ ಕುರಿತು ಮಾಹಿತಿ ವಿನಿಮಯಗೊಳಿಸಲು ಒಂದೊಳ್ಳೆ ಮಾಧ್ಯಮವಾಗಿಯೂ ಕೂಡ ಜಾನಪದ ಕಲೆಗಳು ಉತ್ತಮ ಪ್ರಭಾವವನ್ನ ಬೀರಿದೆ. ಸತಿ ಸಹಗಮನ ಪದ್ದತಿ, ವರದಕ್ಷಿಣೆ ಕಿರುಕುಳ, ಬಾಲ್ಯ ವಿವಾಹ ಮೊದಲಾದ ಸಾಮಾಜಿಕ ಪಿಡುಗನ್ನೇ ಕೇಂದ್ರ ಬಿಂದುವಾಗಿಟ್ಟುಕೊಂಡು ರಾಷ್ಟ್ರೀಯ ಸೇವಾ ಯೋಜನೆಯಂತಹ ಅನೇಕ ಸಂಘ ಸಂಸ್ಥೆಗಳು ದೇಶದೆಲ್ಲೇಡೆ ಬೀದಿ ನಾಟಕವನ್ನ ಮಾಡಿಸುವ ಮೂಲಕ ಸಮಾಜದ ಏಳಿಗೆಗೆ ಶ್ರಮಿಸುತ್ತಿದೆ. ಸಂಸ್ಕೃತಿ ಹಾಗೂ ಕಲೆ ಇವೆರಡು ಒಂದಕ್ಕೊಂದು ಅವಲಂಬನೆಯಿಂದ ಕೂಡಿದ್ದು, ಕಲೆ ಬಿಟ್ಟು ಸಂಸ್ಕೃತಿಯಿಲ್ಲ, ಸಂಸ್ಕೃತಿ ಬಿಟ್ಟು ಕಲೆಯಿಲ್ಲ ಎನ್ನಬಹುದಾಗಿದೆ. ಕಳರಿ ಪಟ್ಟು ಇದೀಗ ಅಳಿವಿನಂಚಿನಲ್ಲಿದೆ, ಕಳರಿ ಎನ್ನುವಂತದ್ದು ನಮ್ಮ ಕಲೆಯ ಬಹುದೊಡ್ಡ ಭಾಗ. ಹಾಗೇ ಈ ಕಲೆಯೊಂದು ಜೀವರಕ್ಷಕವು ಆಗಿದೆ. ತನ್ನ ಆತ್ಮರಕ್ಷಣೆಗೋಸ್ಕರ ಇಟ್ಟಂತ ಇಂತಹ ಕಲೆಯನ್ನ ಇಂದು ಪ್ರಶಂಶಿಸುವವರ ಸಂಖ್ಯೆ ಕಡಿಮೆಯಾಗಿದೆ. ಮಂತ್ರಕ್ಕೂ ಕೂಡ ನಮ್ಮ ಸಂಸ್ಕೃತಿಯಲ್ಲಿ ಉತ್ತಮ ಹಿನ್ನೆಲೆಯಿದೆ. ಉದಾಹರಣೆಗೆ ಮೃತ್ಯುಂಜಯ ಮಂತ್ರವನ್ನು ಪಠಿಸುವಾಗ ನಮ್ಮ ದೇಹದ ಪ್ರತಿಯೊಂದು ಭಾಗಕ್ಕೂ ಶಕ್ತಿಕೊಟ್ಟು ನಮ್ಮ ಆಯುಷ್ಯ ಹೆಚ್ಚಿಸುವಲ್ಲಿ ಪರಿಣಾಮಕಾರಿಯಾಗಿದೆ. ಇಡೀ ವಿಶ್ವದಲ್ಲೇ ಭೂಮಿಯನ್ನು ತಾಯಿಯ ರೂಪದಲ್ಲಿ ನೋಡಿದ್ದು ನಮ್ಮ ಭಾರತ. ಅದರಲ್ಲೂ ಕನ್ನಡಿಗರಾದ ನಾವು ಭೂಮಿಯನ್ನು ತಾಯಿ 'ಭುವನೇಶ್ವರಿ' ಗೆ ಹೋಲಿಸುತ್ತೇವೆ. ಪ್ರಕೃತಿ ಹಾಗೂ ಸಂಸ್ಕೃತಿ ನಡುವಿನ ಉತ್ತಮ ಸಂಬಂಧವೇ ಸಂಪ್ರದಾಯವಾಗಿದ್ದು, ನಾಗರ ಹಾವನ್ನು ನಾವು ಪೂಜೆ ಮಾಡುತ್ತೇವೆ. ನಾಗಾರಾಧನೆ ಕೂಡ ನಮ್ಮ ಸಂಸ್ಕೃತಿ ಹಾಗೂ ಕಲೆಯ ಅವಿಭಾಜ್ಯ ಅಂಗವಾಗಿದೆ. 2000 ವರ್ಷಗಳ ನಿರಂತರ ದಾಳಿಯ ಬಳಿಕವು ಕೂಡ ನಮ್ಮ ಸಂಸ್ಕೃತಿ ಅವಿನಾಷಿನಿ ಗುಣದೊಂದಿಗೆ ನಿಂತಿರುವಂತದ್ದು. ಆದರೆ ಇವತ್ತು ವಿದೇಶಿ ಸಂಸ್ಕೃತಿಗಳಿಗೆ ಮರುಳಾಗಿ ನಾವು ನಮ್ಮ ಪೂರ್ವಜರ ಪರಿಶ್ರಮಕ್ಕೆ ಬೆಲೆಯಿಲ್ಲದಂತೆ ವರ್ತಿಸುತ್ತಿರುವುದು ನಿಜಕ್ಕೂ ವಿಷಾದನೀಯ. ನಮ್ಮ ದೇಶಿಯ ಸಂಗೀತಗಳಾದ ಶಾಸ್ತ್ರಿಯ ಸಂಗೀತ, ನಮ್ಮ ಮನಸ್ಸನ್ನ ಶಾಂತವಾಗಿಸುತ್ತದೆ. ಅದೇ ಪಶ್ಚಿಮಾತ್ಯಾ ಸಂಸ್ಕೃತಿಗಳು ನಮ್ಮನ್ನು ಉದ್ರೇಕಿಸುತ್ತದೆ. ಉದಾಹರಣೆಗೆ ಡಿ. ಜೆ ಹಾಡುಗಳು, ಕುಡಿತದ ಹಾಡುಗಳು ಇವೆಲ್ಲವೂ ಯುವ ಮನಸ್ಸುಗಳನ್ನು ಕೆರಳಿಸುವಂತೆ ಮಾಡುತ್ತದೆ. ಜಗತ್ತಿನ ಇನ್ನಾವುದೇ ರಾಷ್ಟ್ರಗಳು ಎದುರಿಸದಷ್ಟು ಪರಕೀಯರ ಆಕ್ರಮಣಗಳನ್ನು ಎದುರಿಸಿಯೂ ಭಾರತದ ಮಣ್ಣಿನಲ್ಲಿ ಸನಾತನ ಸಂಸ್ಕೃತಿ ಇನ್ನೂ ಜೀವಂತವಾಗಿದೆ ಎಂದಾದರೆ ಅದಕ್ಕೆ ಈ ಸಂಸ್ಕೃತಿಯ ಉದಾತ್ತ ಚಿಂತನೆಗಳೇ ಕಾರಣ.

ಗುರುರಾಜ್ ಗಂಟಿಹೊಳೆ

ಶಾಸಕರು, ಬೈಂದೂರು ವಿಧಾನಸಭಾ ಕ್ಷೇತ್ರ